


**ಯಾರು ಯಾರನ್ನು ಮದುವೆಯಾದರೂ ಆಗೋದು ಮಕ್ಕಳೇ ಅಲ್ವಾ? ಗಿಲ್ಬರ್ಟ್, ನರ್ಸಮ್ಮಳಿಗೂ ಮಕ್ಕಳಾದರು. ಒಂದಲ್ಲ, ಎರಡಲ್ಲ, ಮೂರು. ಹೆಂಡತಿ ನರ್ಸಮ್ಮಳಲ್ಲವೇ? ಅಲ್ಲಿಗೆ ನಿಲ್ಲಿಸಿಬಿಟ್ಟಳು.**

ಆ ಮನೆಯ ಪುಟ್ಟ ಅಂಗಳದೆದುರು ದೊಡ್ಡದಾದ ಹೂ ತೋಟವಿತ್ತು. ಅದು ನಯನಮನೋಹರವಾಗಿತ್ತು. ಅದರಲ್ಲಿ ಗುಲಾಬಿ, ಮಲ್ಲಿಗೆ, ತಾವರೆ, ಸೇವಂತಿಗೆ, ಪಾರಿಜಾತ, ಶಂಖಪುಷ್ಪ, ನಿತ್ಯ ಪುಷ್ಪ, ಬೋಗನ್‌ವಿಲ್ಲಾ, ನೆಲಗುಲಾಬಿ, ಲಿಲ್ಲಿ ಮೊದಲಾದ ಹೂವುಗಳೊಡನೆ ಸಿಂಗೋನಿಯಾ, ಮನಿಪ್ಲ್ಯಾಂಟ್, ವಾಂಡ್ರಿಸ್ ಜ್ಯೂ, ಟರ್ಟಲ್ ಸೀನ್, ಬ್ಲೀಡಿಂಗ್ ಹಾರ್ಟ್, ಸಾಂಗ್ ಓಫ್ ಇಂಡಿಯಾ, ಸ್ಲೀಪಿಂಗ್‌ಹಿಬಿಸಸ್ ಮುಂತಾದ ಹೂಗಳು, ಗಿಡಗಳು, ಬಳ್ಳಿಗಳು ಬೆಳೆದು ನೋಡುಗರಿಗೆ ಹಿತವನ್ನು ಉಂಟು ಮಾಡುತ್ತಿದ್ದವು.

ನಾಯಿಗಳ ಬೊಗಳಿಕೆ ಅವನನ್ನು ಮುಂದೆ ಹೋಗದಂತೆ ತಡೆದವು. ಒಂದು ಬೃಹತ್ ಅಲ್ಸೇಶಿಯನ್, ಇನ್ನೊಂದು ಡಾಬರ್‌ಮನ್, ಮತ್ತೊಂದು ಲೋಕಲ್ ತಳಿಯ ನಾಯಿಗಳು ಭಯಾನಕವಾಗಿ ಬೊಗಳುತ್ತಿರುವಾಗ ಮೂರು ಬಾತು ಕೋಳಿಗಳು ಕಾಣಿಸಿಕೊಂಡವು. ನಾಯಿಗಳ ಬೊಗಳುವಿಕೆ ಕೇಳಿ ಮನೆಯ ಬಾಗಿಲು ತೆರೆಯಿತು. ಸುಮಾರು ಎಂಬತ್ತು ದಾಟಿದ ಅಜ್ಜಿಯೊಬ್ಬಳು ಕರೆದು 'ಬರಬಾರದಾ ಮಗಾ? ನಾಯಿಗಳನ್ನು ಕಟ್ಟಿದ್ದಕ್ಕೆ ಸರಿಹೋಯ್ತು. ಇಲ್ಲದಿರುತ್ತಿದ್ದರೆ ನೀನೀಗ ಪೀಸ್ ಪೀಸ್ ಆಗಿರುತ್ತಿದ್ದೆ' ಎಂದು ಅವನನ್ನು ಆಕ್ಷೇಪಿಸಿತು. ನಾಯಿಗಳನ್ನು ಬೈದು ಸುಮ್ಮನಾಗಿಸಿ 'ಅರೆ, ಅಲ್ಲೇ ನಿಂತಿದ್ದೀಯಲ್ಲಾ? ಒಳಗೆ ಬರಬಹುದು' ಎಂದು ಆಹ್ವಾನಿಸಿತು.

ಅವನಿಗೆ ಎಲ್ಲವೂ ಆಶ್ಚರ್ಯಕರವಾಗಿ ಕಾಣಿಸಿತು. ಅದು ಮಧ್ಯಮ ವರ್ಗೀಯರ ಮನೆಯಂತಿತ್ತು. ಅಂಥವರು ಅಲ್ಸೇಶಿಯನ್ ಮತ್ತು ಡಾಬರ್‌ಮನ್‌ನಂತಹ ನಾಯಿಗಳನ್ನು ಸಾಕುವುದೆಂದರೇನು? ಬಾತುಕೋಳಿಗಳನ್ನೂ ಸಾಕುತ್ತಿದ್ದಾರಲ್ಲಾ ಎಂದುಕೊಳ್ಳುವಾಗ ಮೂರು ವಿದೇಶಿ ತಳಿಯ ಬೆಕ್ಕುಗಳು ಕಾಣಿಸಿಕೊಂಡವು. ಮೂಲೆಯ ಪಂಜರದಲ್ಲಿ ಮೂರು ಅಳಿಲುಗಳು ಓಡಾಡಿಕೊಂಡಿದ್ದವು. ಮನೆಯೊಳಗೆ ಒಂದು ಹೇಂಟೆ ಮೊಟ್ಟೆ ಇಡುವ ಭಂಗಿಯಲ್ಲಿ ಕುಳಿತುಕೊಂಡಿತ್ತು. 'ಎರಡು ಹುಂಜಗಳು ನಿನಗೆ ಕಾಣಸಿಗಲಿಲ್ಲವೇ?' ಎಂದು ಅಜ್ಜಿ ಪ್ರಶ್ನಿಸುತ್ತಿರುವಾಗ ಮ್ಹೇ ಎಂಬ ಸ್ವರ ಅಂಗಳದಿಂದ ಕೇಳಿಸಿತು. ಅಲ್ಲಿ ಮೂರು ಆಡುಗಳಿದ್ದವು.

'ಕುಳಿತುಕೋ ಮಗಾ. ನೀನು ಯಾರೋ ಹೊಸಬನಂತಿದ್ದೀಯಾ? ಹೂ ಗಿಡಕ್ಕಾಗಿ ಬಂದಿಯಾ?'

ಅಜ್ಜಿಯ ಪ್ರಶ್ನೆಗೆ ಅವನು ಉತ್ತರಿಸಿದ.

'ನಾನೊಬ್ಬ ಪತ್ರಕರ್ತ ಅಜ್ಜಿ. ಜಾತಿ ಬಿಟ್ಟು ಮದುವೆಯಾದವರ ಅಭಿಪ್ರಾಯ ಸಂಗ್ರಹಿಸಲು ಬಂದವ. ಇಲ್ಲಿಗೆ ಬಂದು ನೋಡಿದರೆ ಎಲ್ಲವೂ ವಿಸ್ಮಯ, ನೀವು ಸಾಕುವ ಪ್ರಾಣಿ–ಪಕ್ಷಿಗಳು ಮೂರರ ಸಂಖ್ಯೆಯಲ್ಲೇ ಇದ್ದಾವಲ್ಲಾ? ಇದೇಕೆ ಹೀಗೆ'

ಅಜ್ಜಿ ಬಾಯಿಯನ್ನು ಕೈಯಲ್ಲಿ ಮುಚ್ಚಿ ನಕ್ಕಿತು.

'ಎದುರಿನ ಮೂರು ಹಲ್ಲು ಹೋಗಿವೆ ಮಗಾ. ನಿನಗೆ ಹೇಗೆ ಮುಖ ತೋರಿಸಲಿ?'

'ಅವೂ ಮೂರಾ?'

'ಅಷ್ಟೇ ಅಲ್ಲ. ನಮ್ಮಲ್ಲಿ ಮೂರು ಪಾರಿವಾಳಗಳಿವೆ. ಇನ್ನೇನು ಬರುವ ಹೊತ್ತು?'

'ಅಲ್ಲಿಗೆ ಮುಗಿಯಿತಾ?'

'ಇಲ್ಲ. ನೋಡು, ಅಲ್ಲಿ ಹಟ್ಟಿ ಕಾಣುತ್ತಿದೆಯಲ್ಲಾ? ಅದರಲ್ಲಿ ಮೂರು ಜೆರ್ಸಿ ದನಗಳಿವೆ'.

'ಮೂರರ ಸಂಖ್ಯೆಯಲ್ಲೇ ಏಕಜ್ಜಿ?'

'ಮಗಾ? ನೀನು ಬಂದ ವಿಷಯ ಬಿಟ್ಟು ಬೇರೆ ಪ್ರಶ್ನೆ ಕೇಳುತ್ತಿರುವೆ. ಇರಲಿ. ಎಲ್ಲಾ ಪ್ರಾಣಿಗಳ ಜೀವನದ ವೈಶಿಷ್ಟ್ಯ ಮೂರೇ. ಜನನ, ಜೀವನ, ಮರಣ. ಅವುಗಳ ಸಂಕೇತ ಇದು'.

'ಈ ಪಕ್ಷಿಗಳು ಮೊಟ್ಟೆಯಿಟ್ಟು, ಪ್ರಾಣಿಗಳು ಮರಿ ಹಾಕಿದರೆ ಏನು ಮಾಡುತ್ತೀರಿ?'

'ನಾವು ಮೂರಕ್ಕಿಂತ ಹೆಚ್ಚನ್ನು ಯಾವುದನ್ನೂ ಇಟ್ಟುಕೊಳ್ಳುವುದಿಲ್ಲ. ಮಾರಿಬಿಡ್ತೇವೆ. ಬಾ ಕೂತುಕೋ. ಅಂದಹಾಗೆ ಬಂದ ವಿಷಯ ಹೇಳು'.

ಅವನು ತನ್ನ ವಿವರಗಳನ್ನು ತೆರೆದಿಟ್ಟ. ತನ್ನ ಪತ್ರಿಕೆಗಾಗಿ, ಜಾತಿ ಬಿಟ್ಟು ಮದುವೆಯಾದವರ ಸಂದರ್ಶನ ಲೇಖನ ತಯಾರಿಸಲಿಕ್ಕಾಗಿ ತಾನು ಬಂದುದೆಂದು ಹೇಳಿಕೊಂಡ.

'ನಮ್ಮ ಬಗ್ಗೆ ನಿನಗೆ ಗೊತ್ತಾದದ್ದು ಹೇಗೆ? ಇಷ್ಟಕ್ಕೂ ನಾನು ಪ್ರಾಯ ಸಂದ ಮುದುಕಿ. ನಿನಗೆ ಏನು ಮಾಹಿತಿ ಕೊಡಬೇಕೆಂದು ಗೊತ್ತಾಗುತ್ತಿಲ್ಲ. ಸಂಜೆ ಮಗ ಬರುತ್ತಾನೆ. ಅಷ್ಟರವರೆಗೆ ಕಾಯ್ತೀಯಾ ಮಗಾ?'

'ನನಗೆ ನಿಮ್ಮ ಮಗ ನಿನ್ನೆ ಸಿಟಿಯಲ್ಲಿ ಸಿಕ್ಕರು. ಆಗ ನಾನು ನಿಮ್ಮ ಊರಲ್ಲಿ ಜಾತಿ ಬಿಟ್ಟು ಮದುವೆಯಾದವರಿದ್ದಾರಾ? ನಾನೊಂದು ಲೇಖನ ಮಾಡಬೇಕಿದೆ ಎಂದೆ. ಊರಿಗೆ ಬನ್ನಿ. ನೇರವಾಗಿ ನನ್ನ ಮನೆಗೇ ಎಂದು ಅವರೆಂದರು. ಅವರು ಮನೆಯ ಗುರುತನ್ನು ಹೇಳಿದ್ದರು. ನೆನಪಿಟ್ಟುಕೊಂಡು ನೇರ ಇಲ್ಲಿಗೆ ಬಂದೆ. ನಿಮ್ಮ ಮನೆಯಲ್ಲಿ ಯಾರಾದರೂ ಜಾತಿ ಬಿಟ್ಟು ಮದುವೆಯಾದವರಿದ್ದಾರಾ? ನನಗೆ ಬೇಕಿರುವುದು ಅಂಕಿ ಅಂಶಗಳ ಮಾಹಿತಿಯಲ್ಲ. ಹಾಗೆ ಮದುವೆಯಾದವರ ನೋವು ನಲಿವು'.

ಅಜ್ಜಿ ಮತ್ತೊಮ್ಮೆ ನಕ್ಕಿತು. ಈ ಬಾರಿ ಬಾಯಿ ಮುಚ್ಚಿಕೊಳ್ಳಲಿಲ್ಲ.

'ನಿಮಗೆ ವಿಳಾಸ ಕೊಟ್ಟನಲ್ಲ ನನ್ನ ಮಗ. ಅವ ಜಾತಿ ಬಿಟ್ಟು ಮದುವೆಯಾದೋನು. ಅವನ ಹೆಂಡತಿ ಟೀಚರು. ಇಬ್ಬರೂ ಬರುವಾಗ ಸಂಜೆಯಾಗುತ್ತೆ. ನಿನಗೆ ಅವರಿಬ್ಬರ ಅನುಭವ ಸಿಗಬೇಕಾದರೆ ಅಲ್ಲಿವರೆಗೆ ನೀನು ಕಾಯಬೇಕಾಗುತ್ತದೆ'.

ಹಾಗೆ ಅಜ್ಜಿ ಒಪ್ಪಿಕೊಂಡುದನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ನಿನ್ನೆ ಅವನು ಬೇರೆ ಹಳ್ಳಿಯಲ್ಲಿ ಸಂದರ್ಶನ ನಡೆಸಿದ್ದ. ಒಡ ಪೆಟ್ಟಿಗೆ ಯಾರೂ ತಾವು ಜಾತಿ ಬಿಟ್ಟು ಮದುವೆಯಾದುದನ್ನು ಒಪ್ಪಿಕೊಂಡಿರಲಿಲ್ಲ.